ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 3, Nov-Dec 2021, Pp 8-14
©*IIMRD*, Mysuru

IIMRD JOURNALS

www.iimrd.com

# ಬನವಾಸಿ ದೇಶದೊಳ್ ಪಂಪ

**ಡಾ. ಲೋಕೇಶ್ ಟಿ.ಟಿ.**[1]

[1] ಕನ್ನಡ ಉಪನ್ಯಾಸಕರು, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಹಿರೀಸಾವೆ,
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ

## ಸಾರಾಂಶ (Abstract)

*ಕನ್ನಡದ ಆದಿಕವಿ ಮತ್ತು ಶ್ರೇಷ್ಠಕವಿ ಎಂದರೆ, ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಎರಡು ಮಹಾಕಾವ್ಯಗಳನ್ನು ಬರೆದ ಮಹಾಕವಿ ಪಂಪ. ರಂ.ಶ್ರೀ ಮುಗಳಿ ಅವರು ತಮ್ಮ 'ಕನ್ನಡ ಸಾಹಿತ್ಯ ಚರಿತ್ರೆ' ವಿಭಾಗ ಕ್ರಮದಲ್ಲಿ ಹತ್ತನೆಯ ಶತಮಾನದ ಪೂರ್ವಾರ್ಧದಿಂದ ಹನ್ನೆರಡನೆಯ ಶತಮಾನದ ಉತ್ತರಾರ್ಧದವರೆಗಿನ ಕಾಲವನ್ನು 'ಪಂಪ ಯುಗ' ಎಂದು ಕರೆದು, ಪಂಪನನ್ನು ಈ ಯುಗದ ಪ್ರವರ್ತಕನನ್ನಾಗಿಸಿದ್ದಾರೆ. ಪಂಪನ ಕಾವ್ಯದ ಚಾಪು ಆ ಯುಗಕ್ಕೇ ವ್ಯಾಪಿಸಿದೆ. ವೀರಣ್ಣ ಅವರು ಪಂಪನನ್ನು ಕುರಿತು ತೊಂಬತ್ತೊಂದು ಪುಟಗಳ ದೀರ್ಘ ಚರ್ಚೆ ನಡೆಸಿದ್ದಾರೆ, ಇಷ್ಟು ವಿಸ್ತಾರವಾದ ಸಂವಾದ ಪಂಪನಂತಹ ಯುಗಪ್ರವರ್ತಕ ಕವಿಗೆ ಅವಶ್ಯ. ಪಂಪನ ಬಗ್ಗೆ ದೀರ್ಘ ಸಂವಾದದಿಂದ ಮಾತ್ರ ನಾವು ಈ ಯುಗದ ಫ್ಯಾಷನ್ ಅನ್ನು ತಿಳಿದುಕೊಳ್ಳಲು ಸಾಧ್ಯ.*

**ಮುಖ್ಯಪದಗಳು (Keywords):** ಬನವಾಸಿ, ಪಂಪ, ಚಕ್ರವರ್ತಿಗಳು, ಸಾಮಂತರು, ಕವಿಗಳು.

## ಪೀಠಿಕೆ

ಪಂಪ ಒಬ್ಬ ಸಾಮಂತ ರಾಜನ ಆಶ್ರಯದಲ್ಲಿದ್ದ ಕವಿ. ರಾಷ್ಟ್ರಕೂಟ ಚಕ್ರವರ್ತಿಯನ್ನು ಬಿಟ್ಟು, ಒಬ್ಬ ಸಾಮಂತ ರಾಜನನ್ನು ಮಹಾಭಾರತದ ಅರ್ಜುನನಿಗೆ ಹೋಲಿಸಿ ಕಾವ್ಯ ರಚಿಸುವುದು ಸಾಧ್ಯವೆ. 'ರುಂದ್ರಾಂಬೋಧಿ ಪರೀತ ಮಹೀಂದ್ರರದಾರಿನ್ನರೀ ನರೇಂದ್ರಂ'. ಈ ರೀತಿ ಒಬ್ಬ ಚಕ್ರವರ್ತಿ ಇರುವಾಗ ಒಬ್ಬ ಸಾಮಂತ ರಾಜನ ಬಗ್ಗೆ ಬರೆಯುವ ಧೈರ್ಯ ಕವಿಗೆ ಹೇಗೆ ಬಂತು, ಹಾಗೆ ಬರೆಸಿಕೊಳ್ಳುವ ಧೈರ್ಯ ರಾಜನಿಗೆ ಹೇಗೆ ಬಂತು ಎಂಬ ಪ್ರಶ್ನೆ ಸಾಧಾರಣವಾಗಿ ಹುಟ್ಟುತ್ತದೆ. ಈ ಪ್ರಶ್ನೆಗೆ ಉತ್ತರ ಸಿಗುವುದು ಈ ಕಾಲದ ಚಾರಿತ್ರಿಕ ಪರಿಸರವನ್ನು ತಿಳಿದುಕೊಂಡಾಗ ಮಾತ್ರ.

ಪಂಪ ವಿಕ್ರಮಾರ್ಜುನ ವಿಜಯದ ಕೊನೆಯ ಆಶ್ವಾಸದಲ್ಲಿ ಅರಿಕೇಸರಿ ತನಗೆ ರಾಷ್ಟ್ರಕೂಟ ಚಕ್ರವರ್ತಿ ಬಲ್ಲಹನಿಗೆ ತಿಳಿಯುವಂತೆ ಎಲ್ಲ ರೀತಿಯ ದಾನ, ದತ್ತಿ, ಸನ್ಮಾನಗಳನ್ನು ನೀಡಿದ ಎಂದಿದ್ದಾನೆ. ಈ ಸಂದರ್ಭವನ್ನು ಬಿಟ್ಟರೆ ಮತ್ತೆಲ್ಲಿಯೂ ಪಂಪ ಚಕ್ರವರ್ತಿಯನ್ನು ಸ್ಮರಿಸಿಲ್ಲ. ಡಿ.ಎಲ್. ನರಸಿಂಹಾಚಾರ್

*Please cite this article as: ಡಾ.ಲೋಕೇಶ್ ಟಿ.ಟಿ. (2021).* ಬನವಾಸಿ ದೇಶದೊಳ್ ಪಂಪ. *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 8–14*

ಅವರು ಈ ಸಂದರ್ಭವನ್ನು "ಪಂಪನ ಸನ್ಮಾನ ಸಮಾರಂಭಕ್ಕೆ ಅರಿಕೇಸರಿ ತನ್ನ ಚಕ್ರವರ್ತಿಯಾಗಿದ್ದ ಮೂರನೆಯ ಕೃಷ್ಣನಿಗೆ ಆಹ್ವಾನ ಪತ್ರಿಕೆಯನ್ನು ಕಳುಹಿಸಿದಂತೆ ತೋರುತ್ತದೆ"[1] ಎಂದು ಊಹಿಸುತ್ತಾರೆ. ಈ ವಿಷಯವನ್ನು ಅರವಿಂದ ಮಾಲಗತ್ತಿ ಅವರು ಚರ್ಚಿಸುತ್ತ, "ಈ ರೀತಿ ಹೇಳಿದಾಗ ಯಾವ ಚಕ್ರವರ್ತಿಗೆ ತಾನೇ ಮನಸ್ಸಿನಲ್ಲಿ ಮುಳ್ಳು ಮುರಿದಂತೆ ಆಗುವುದಿಲ್ಲ? ಅದರಲ್ಲೂ ಈ ಸಂದರ್ಭದಲ್ಲಿ ಪಂಪನು ಚಕ್ರವರ್ತಿಯ ಬಗ್ಗೆ ಹೇಳಿಕೊಳ್ಳುವ ಅವಶ್ಯಕತೆಯಾದರು ಏನಿತ್ತು? ಬಹುಶಃ ಪಂಪ 'ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳಂ' ಎನ್ನುವ ತಂತ್ರ ಇಲ್ಲಿ ಬಳಸಿದ್ದಾನೆ, ಪಂಪನಿಗೆ ಚಕ್ರವರ್ತಿಯ ಆಶ್ರಯ ಸಿಗಲಿಲ್ಲ ಎಂಬ ಶೀತಲ ಕೊರಗು ಇದ್ದಿರಬೇಕು, ಈ ಕಾರಣದಿಂದಲೇ ಪಂಪ ಅರಿಕೇಸರಿಯನ್ನು ಆ ಪರಿಯಲ್ಲಿ ಅಟ್ಟಕ್ಕೇರಿಸುತ್ತಾನೆ! ತನ್ನನ್ನೂ ತನ್ನ ಕವಿತಾಶಕ್ತಿಯನ್ನೂ ಎದೆತಟ್ಟಿ ಹೇಳಿಕೊಳ್ಳುತ್ತಾನೆ. ಪಂಪ ಮುಳ್ಳನ್ನು ಮುಳ್ಳಿನಿಂದ ತೆಗೆಯುವ ಕೆಲಸದಲ್ಲಿ, ಕೃಷ್ಣ–ದುರ್ಯೋಧನರು ಕಾವ್ಯದಲ್ಲಿ ಯಶಸ್ವಿಯಾಗಿರಬೇಕು"[2] ಎಂದು ಹೇಳಿದ್ದಾರೆ. ಆದರೆ ಇದು ಆಹ್ವಾನ ಪತ್ರಿಕೆಯ ವಿಷಯವಷ್ಟೇ ಅಲ್ಲ, ಇದರೊಳಗೆ ಒಂದು ಚಾರಿತ್ರಿಕ ಘಟನಾವಳಿಗಳೇ ಅಡಗಿವೆ.

ಈ ವಿಷಯವನ್ನು ಸಿ.ವೀರಣ್ಣ ಚಾರಿತ್ರಿಕವಾಗಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ಈ ಚರ್ಚೆಯನ್ನು ಸಂಕ್ಷಿಪ್ತವಾಗಿ ಹೀಗೆ ಸಂಗ್ರಹ ಮಾಡಬಹುದು. 'ಸಾಕ್ಷಾದಿಂದ್ರಂ ತಾನೆನೆ ಸಲೆನೆಗಟ್ದಿಂದ್ರೇಂದ್ರನ ತೋಳೆ ತೊಟ್ಟಿಲಾಗಿರೆ ಬಳೆದಂ' ಅರಿಕೇಸರಿ ರಾಷ್ಟ್ರಕೂಟ ಇಂದ್ರನ ತೋಳಿನಲ್ಲಿ ಬೆಳೆದವನು ಎಂದು ಪಂಪ ಹೇಳಿದ್ದಾನೆ. ಚಾಲುಕ್ಯ ನರಸಿಂಹನ ಹೆಂಡತಿ ಜಾಕಬ್ಬೆ ಇಂದ್ರನಿಗೆ ಸೋದರಿ, ನರಸಿಂಹ ಜಾಕಬ್ಬೆಯರ ಮಗ, ಈ ಅರಿಕೇಸರಿಗೆ ಇಂದ್ರನ ಮಗಳು ರೇವಕ ನಿರ್ಮಡಿ (ಲೋಕಾಂಬಿಕೆ)ಯನ್ನು ಕೊಟ್ಟು ವಿವಾಹ ಮಾಡಲಾಗಿತ್ತು. ರೇವಕ ನಿರ್ಮಡಿ ರಾಷ್ಟ್ರಕೂಟರ ಹೆಣ್ಣು ಮಗಳೆಂದು ಪರಭಣಿ ತಾಮ್ರ ಶಾಸನ ಹೇಳುತ್ತದೆ. ಅರಿಕೇಸರಿ ಕೇವಲ ರಾಷ್ಟ್ರಕೂಟರ ಸಾಮಂತನಾಗಿರದೇ ಸಂಬಂಧಿಯಾಗಿದ್ದ ಎಂಬುದನ್ನು ವಿಕ್ರಮಾರ್ಜುನ ವಿಜಯದ ಈ ಪದ್ಯ ಮತ್ತು ಈ ತಾಮ್ರ ಶಾಸನ ಸ್ಪಷ್ಟಪಡಿಸುತ್ತದೆ.

'ಉಡೆವಣಿ ಪಱಿಯದ ಮುನ್ನವೇ ತೊಡಗಿ ಚಲಂ ನೆಗಟ್ಟಿ ರಿಪುಬಲಂಗಳನೆ ಪಡಲ್ವಡಿಸಿ' ಈ ಪದ್ಯದ ಆಧಾರದಿಂದ ನೋಡಿದರೆ, ಚಾಲುಕ್ಯ ನರಸಿಂಹನ ನಂತರ ಅರಿಕೇಸರಿ ಬಾಲಕನಾಗಿರುವಾಗಲೇ ಪಟ್ಟಕ್ಕೆ ಬಂದಿದ್ದಾನೆ. ರಾಷ್ಟ್ರಕೂಟರ ಇಂದ್ರನ ನಂತರ ಅವನ ತಮ್ಮ ಬದ್ದೆಗನು (ಮೂರನೆಯ ಅಮೋಘವರ್ಷ) ಮತ್ತು ಅವನ ಹಿರಿಯ ಮಗ ಎರಡನೆಯ ಅಮೋಘವರ್ಷನೂ ಇಂದ್ರನ ಎರಡನೆಯ ಮಗ ನಾಲ್ಕನೆಯ ಗೋವಿಂದರಾಜನಿಂದ ತಿರಸ್ಕೃತರಾಗಿರಬೇಕು. "ಮೂರನೇ ಇಂದ್ರನ ಮರಣಾನಂತರ ಅವನ ಮಗ 2ನೇ ಅಮೋಘವರ್ಷನು ರಾಜನಾದನು (917–18). ಈ ಅಮೋಘವರ್ಷನು ರಾಜನಾಗಲೇ ಇಲ್ಲವೆಂಬ ಫ್ಲೀಟರ್‌ನ ಅಭಿಪ್ರಾಯ ಸರಿಯಲ್ಲ. 3ನೇ ಕೃಷ್ಣನ ದಿಯೋಲಿ ಮತ್ತು ಕರಹಾಡ್ ಶಾಸನಗಳಿಂದ 2ನೇ ಅಮೋಘವರ್ಷ ಸ್ವಲ್ಪಕಾಲ ರಾಜನಾಗಿದ್ದುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಆದರೆ ಪಟ್ಟಾಭಿಷೇಕವಾಗಿ ಒಂದು ವರ್ಷದೊಳಗೆ ತಂದೆಯ ಮರಣದ ದುಃಖದಿಂದ ಸತ್ತನೆಂದು ಕರಹಾಡ್ ಶಾಸನ ಹೇಳುತ್ತದೆ. ಈತನ ನಂತರ 4ನೇ ಗೋವಿಂದ ರಾಜನಾಗುತ್ತಾನೆ. ಆದರೆ 4ನೇ ಗೋವಿಂದ ತನ್ನ ಶಾಸನದಲ್ಲಿ

ಇಂದ್ರನಾದೊಡನೆಯೇ ತಾನು ರಾಜನಾಗಿದ್ದಾಗಿ ಹೇಳಿಕೊಂಡಿದ್ದಾನೆ. ಅಂತೂ ಅಣ್ಣನ ಮರಣಕ್ಕೆ 4ನೇ ಗೋವಿಂದ ಕಾರಣನಾಗಿರಬೇಕೆಂದು ತೋರುತ್ತದೆ"[3]

'ಗೊಜ್ಜಿಗನೆಂಬ ಸಕಲ ಚಕ್ರವರ್ತಿ ಬೆಸಸೆ ದಂಡುವಂದ ಮಹಾಸಾಮಂತರಂ ಮರಲಿರಿದು ಗೆಲ್ಲ ಮಹಾಸಾಮಂತ ಚೂಡಾಮಣಿಯಂ' 3ನೇ ಅಮೋಘವರ್ಷನನ್ನು ಕೊಂದೋ ಅಥವಾ ಮೂಲೆಗುಂಪು ಮಾಡಿ ಅಧಿಕಾರಕ್ಕೆ ಬಂದ ಗೊಜ್ಜಿಗನ ವಿರುದ್ಧ ಅರಿಕೇಸರಿ ನಿಂತಿದ್ದನು ಎಂಬುದು ಈ ಪದ್ಯದಿಂದ ತಿಳಿಯುತ್ತದೆ. ಹಾಗಾಗಿ ಗೊಜ್ಜಿಗ ಅರಿಕೇಸರಿಯ ವಿರುದ್ಧ ಎಲ್ಲ ಸಾಮಂತರು ದಂಡೆತ್ತಿ ಹೋಗುವಂತೆ ಆಜ್ಞೆ ಮಾಡಿದ್ದ. ಆ ಸಾಮಂತರೆಲ್ಲರನ್ನು ಅರಿಕೇಸರಿ ಸೋಲಿಸಿದ್ದ. 'ಅತಿವರ್ತಿಯಾಗಿ ಮಾರ್ಮಲೆವ ಚಕ್ರವರ್ತಿಯಂ ಕಿಡಿಸಿ ತನ್ನ ನಂಬಿ ಬಂದ ಬದ್ದೆಗ ದೇವಂಗೆ ಸಕಳ ಸಾಮ್ರಾಜ್ಯವನೋರಂತು ಮಾಡಿನಿರಿಸಿದರಿಕೇಸರಿ' ಎಂದಿದ್ದಾನೆ ಪಂಪ. ಗೋವಿಂದರಾಜನನ್ನು ಸಿಂಹಾಸನದಿಂದ ಹೊರಹಾಕಿ ಅವನ ಚಿಕ್ಕಪ್ಪನನ್ನು ಚಕ್ರವರ್ತಿಯನ್ನಾಗಿ ಮಾಡಿದ ಅರಿಕೇಸರಿಯ ಪರಾಕ್ರಮ ಮತ್ತು ಔದಾರ್ಯ ಪಂಪನ ಮನಸ್ಸನ್ನು ಮುಟ್ಟಿದೆ. ಚಕ್ರವರ್ತಿಯನ್ನು ಸೋಲಿಸಿದಾಗ ತಾನೇ ಚಕ್ರವರ್ತಿಯಾಗುವ ಅವಕಾಶವನ್ನು ಯಾವ ಸಾಮಂತನೂ ಕಳೆದುಕೊಳ್ಳುತ್ತಿರಲಿಲ್ಲ. ಆದರೆ ಅರಿಕೇಸರಿ ಅಂತಹ ದುರಾಸೆಗೆ ಮನಸ್ಸು ಕೊಡಲಿಲ್ಲ. "ರಾಜನಾದ 4ನೇ ಗೋವಿಂದ ಮೆಚ್ಚುಗೆಯನ್ನು ಪಡೆಯುವಂತಹ ವ್ಯಕ್ತಿಯೇನೂ ಆಗಿರಲಿಲ್ಲ. ಯಾವಾಗಲು ನರ್ತಕಿಯರು ಇವನನ್ನು ಸುತ್ತುವರಿದಿರುತ್ತಿದ್ದರೆಂದು ರಟ್ಟರಾಜನ ಒಂದು ಶಾಸನ ಹೇಳುತ್ತದೆ. ಈತನ ಉನ್ಮತ್ತ ವಿಲಾಸ ಜೀವನವನ್ನು ಕಂಡು ಸಹಿಸಲಾರದೆ ಸಾಮಂತರೆಲ್ಲರೂ ತಿರುಗಿಬಿದ್ದು, ಅವನ ಚಿಕ್ಕಪ್ಪ ಮೂರನೇ ಅಮೋಘವರ್ಷನನ್ನು ರಾಜನನ್ನಾಗಿ ಮಾಡಿದರು"[4]

ರಾಷ್ಟ್ರಕೂಟರಲ್ಲಿ ಅತಿಪ್ರಬಲನೆನಿಸಿದ ಚಕ್ರವರ್ತಿ ಬದ್ದೆಗನ (ಮೂರನೇ ಅಮೋಘವರ್ಷ) ಮಗ ಮೂರನೇ ಕೃಷ್ಣನ ಆಳ್ವಿಕೆಯಲ್ಲಿಯೂ ಸಾಮಂತನಾಗಿದ್ದ ಅರಿಕೇಸರಿಯು ತಮ್ಮ ತಂದೆಗೆ ಚಕ್ರವರ್ತಿ ಪಟ್ಟವನ್ನು ತಂದುಕೊಟ್ಟ ವಿಷಯ ಮೂರನೆಯ ಕೃಷ್ಣನಿಗೆ ತಿಳಿದಿದ್ದು, ಈ ಉಪಕಾರಕ್ಕಾಗಿ ಮೂರನೆಯ ಕೃಷ್ಣ ಅರಿಕೇಸರಿಯ ಬಗ್ಗೆ ಅಪಾರ ಗೌರವವುಳ್ಳವನಾಗಿದ್ದ. "ಸುಮಾರು 935ರಲ್ಲಿ ಮೂರನೇ ಅಮೋಘವರ್ಷನು ರಾಜನಾದಂತೆ ತೋರುತ್ತದೆ. 940ರ ವೇಳೆಗಾಗಲೇ ಇವನ ಮಗ ಮೂರನೇ ಕೃಷ್ಣನನು ರಾಜನಾಗಿದುದಕ್ಕೆ ಆಧಾರಗಳು ದೊರೆಯುವುದರಿಂದ ಈತನ ಆಳ್ವಿಕೆ ಕೇವಲ 4 ವರ್ಷಗಳು ಮಾತ್ರ ನಡೆದಿರಬೇಕೆಂದು ಹೇಳಬಹುದು"[5] ಪಂಪನ ಚಾರಿತ್ರಿಕ ಪರಿಸರವನ್ನು ಅವನ ಕಾವ್ಯದಲ್ಲಿರುವ ಸೂಕ್ಷ್ಮ ಸಂಗತಿಗಳ ಮೂಲಕ ಶೋಧಿಸಿರುವ ಸಿ.ವೀರಣ್ಣ ಅವರ ಸಂಶೋಧನೆ ನೈಜವಾಗಿದೆ ಎಂಬುದು ಇಲ್ಲಿ ಉಲ್ಲೇಖಿಸಿರುವ ತಿಪ್ಪೇರುದ್ರಸ್ವಾಮಿಯವರ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಕೃತಿಯ ಭಾಗಗಳಿಂದ ಇನ್ನೂ ಸ್ಪಷ್ಟವಾಗುತ್ತದೆ.

ಅರವಿಂದ ಮಾಲಗತ್ತಿಯವರು ಹೇಳಿರುವಂತೆ ಪಂಪ ಅರಿಕೇಸರಿ ಮತ್ತು ಮೂರನೇ ಕೃಷ್ಣನ ವಿಷಯದಲ್ಲಿ 'ಮುಳ್ಳಿನಿಂದ ಮುಳ್ಳು' ತೆಗೆಯುವ ತಂತ್ರ ಬಳಸಿದ ಎಂಬುದು ಮತ್ತು ತನಗೆ ಚಕ್ರವರ್ತಿಯ ಆಶ್ರಯ ಸಿಗಲಿಲ್ಲ ಎಂಬ ಕೊರಗು ಪಂಪನಿಗೆ ಇತ್ತು ಎಂಬುದು ಸತ್ಯಕ್ಕೆ ದೂರವಾದ ಮಾತು ಎನಿಸುತ್ತದೆ ಹಾಗೂ ಡಿ.ಎಲ್.ನರಸಿಂಹಾಚಾರ್ಯರು ಹೇಳುವಂತೆ ಇದು ಕೇವಲ ಆಮಂತ್ರಣದ ವಿಷಯವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅರಿಕೇಸರಿಯ ಉದಾರ ನಡವಳಿಕೆ ಪಂಪನಿಗೆ ಮೆಚ್ಚುಗೆಯಾಗಿ, ಅವನ ಉದಾತ್ತ

ಕೀರ್ತಿ ಜಗತ್ತಿನಲ್ಲಿ ನೆಲೆಸಲೆಂದು ಕಾವ್ಯ ನಾಯಕನಲ್ಲಿ ಅಭೇದ್ಯವನ್ನು ಕಲ್ಪಿಸಿ ಕಾವ್ಯ ರಚಿಸಿದೆನೆಂದು ಪಂಪ ಹೇಳುತ್ತಾನೆ. ಅದಕ್ಕಾಗಿಯೇ ಕನ್ನರನರಿವಂತೆ ಅರಿಕೇಸರಿ ತನಗೆ ಸನ್ಮಾನವನ್ನು ಮಾಡಿದನೆಂದು ಪಂಪ ತಿಳಿಸಿರುವುದು ಅವರಿಬ್ಬರ ನಡುವಣ ಮಧುರ ಬಾಂಧವ್ಯವನ್ನು ತಿಳಿಸುತ್ತದೆ. ಈ ಬಾಂಧವ್ಯ ಮತ್ತು ಚಕ್ರವರ್ತಿಯಾಗಬಹುದಾದ ಅವಕಾಶವಿದ್ದರೂ ಅದನ್ನು ತ್ಯಾಗ ಮಾಡಿದ್ದು, ಇವು ಅರಿಕೇಸರಿಗೆ ಚಕ್ರವರ್ತಿಯಿರುವಾಗಲೇ 'ವಿಸ್ತಾರವಾದ ಸಮುದ್ರದಿಂದ ಸುತ್ತುವರಿಯಲ್ಪಟ್ಟ ಈ ಭೂಮಿಯಲ್ಲಿ ಇಂಥವರು ಮತ್ತಾರಿದ್ದಾರೆ' ಎಂದು ಪಂಪನಿಂದ ಹೊಗಳಿಸಿಕೊಳ್ಳುವ ಮತ್ತು ಮಹಾಭಾರತ ಅರ್ಜುನನೊಂದಿಗೆ ತನ್ನನ್ನು ಸಮೀಕರಿಸಿ ಕಾವ್ಯ ಬರೆಸಿಕೊಳ್ಳುವ ರಾಜಕೀಯ ಸನ್ನಿವೇಶ ಸೃಷ್ಟಿಯಾಗಿ 'ವಿಕ್ರಮಾರ್ಜುನ ವಿಜಯ'ದಂಥ ಮಹಾಕಾವ್ಯ ಪಂಪನಿಂದ ಜನ್ಮತಾಳಿದೆ ಎಂದು ವೀರಣ್ಣ ಅವರು ಆಧಾರಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ಈ ರಾಜಕೀಯ ಸನ್ನಿವೇಶವನ್ನು "ಆದಿಕವಿ ಪಂಪನ ಪೋಷಕನಾದ ಎರಡನೆಯ ಅರಿಕೇಸರಿ ರಾಷ್ಟ್ರಕೂಟ 3ನೇಯ ಕೃಷ್ಣನ ಸಾಮಂತನಾಗಿದ್ದರೂ ಸಾಮ್ರಾಟನ ಜರುಬಿನಿಂದ ನಡೆಯುತ್ತಿದ್ದಿರಬೇಕು. ಜನಕ್ಕೆ ಬೇಡವಾದ ಕಾಮುಕ ದೊರೆಯನ್ನು ಕಿತ್ತೊಗೆದು ಹೋರಾಡಿ ಬೇರೊಬ್ಬನನ್ನು ರಾಷ್ಟ್ರಕೂಟ ಚಕ್ರವರ್ತಿಯನ್ನಾಗಿರಿಸಿದ ಶ್ರೇಯಸ್ಸು ಅರಿಕೇಸರಿಯದು"[6] ಎಂದು ರಂ.ಶ್ರೀ.ಮುಗಳಿಯವರು ಸಹ ಉಲ್ಲೇಖಿಸಿರುವುದು ಗಮನಾರ್ಹ.

ಆದಿಪುರಾಣವು ಪಂಪನ ಆದಿಕಾವ್ಯ. ಸಾಮಾನ್ಯವಾಗಿ ಸಾಹಿತ್ಯ ಚರಿತ್ರೆಕಾರರು ಆದಿಪುರಾಣವನ್ನು ಕುರಿತು ಮಾತನಾಡುವಾಗ, ನೀಲಾಂಜನೆಯ ನೃತ್ಯ ಸಂದರ್ಭ, ವಜ್ರಜಂಘ– ಶ್ರೀಮತಿ ಮತ್ತು ಭರತ–ಬಾಹುಬಲಿ ಪ್ರಸಂಗ, ಮುಖ್ಯವಾಗಿ ಈ ಪ್ರಸಂಗಗಳಿಗೆ ಗಮನಕೊಡುವುದು ಹೆಚ್ಚು. ಆದರೆ ಸಿ. ವೀರಣ್ಣ ಅವರ ದೃಷ್ಟಿ ಬೇರೆ ರೀತಿಯಾಗಿದೆ. ನಿರಚನವಾದದ (Deconstruction) ಪ್ರಕಾರ ಸಾಹಿತ್ಯ ವಿಮರ್ಶೆ ಎಂದರೆ, ಒಂದು ಸಾಹಿತ್ಯಕೃತಿ ಪ್ರತಿಪಾದಿಸುವ ತಾತ್ವಿಕತೆಯನ್ನು ಸ್ವತಃ ಅದು ಅಲ್ಲಗಳೆಯುತ್ತಿರುತ್ತದೆ. ಇದನ್ನು ಗುರುತಿಸುವುದೆ ಸಾಹಿತ್ಯ ವಿಮರ್ಶೆ. "To Deconsturct a discourse is to show how it undermines the philosophy it asserts"7.

ಈ ನಿರಚನವಾದದ ಹಿನ್ನೆಲೆಯಲ್ಲಿ ವೀರಣ್ಣ ಅವರು ಪಂಪನ ಆದಿಪುರಾಣವನ್ನು ವಿಮರ್ಶಿಸಿದ್ದಾರೆ. ಆದಿಪುರಾಣದ ಪ್ರಾರಂಭದಲ್ಲೆ ಬರುವ ಭೌತವಾದಿ ಸ್ವಯಂ ಬುದ್ಧನು ಜೈನಧರ್ಮದ ತತ್ವಗಳನ್ನು ಅಲ್ಲಗಳೆಯುವ 'ಒಡಲೊಳೆ ಜೀವಮಿರ್ದು ಗಡ.....' ಪದ್ಯವನ್ನು ಪ್ರಾರಂಭದಲ್ಲಿಯೆ ಉಲ್ಲೇಖಿಸಿ, ತರ್ಕಬದ್ಧವಾದ ಈ ಸಿದ್ಧಾಂತವನ್ನು ಮೂಲಕ್ಕಿಂತ ಸೊಗಸಾಗಿ ಕವಿ ನಿರ್ವಹಿಸಿದ್ದಾನೆ ಎಂದಿದ್ದಾರೆ. ಮುಂದುವರೆದು ಪಂಪನ ಆದಿಪುರಾಣದ ಬಗ್ಗೆ ಹೀಗೆ ಹೇಳುತ್ತಾರೆ. "ಪಂಪನ ರಚನಾ ಸಾಮರ್ಥ್ಯದ ಪ್ರಥಮ ಪ್ರಯತ್ನವಾದ ಆದಿಪುರಾಣದಲ್ಲಿ ಕವಿಯ ಗಮನವೆಲ್ಲ ಪ್ರಕೃತಿ ಮತ್ತು ಹೆಣ್ಣು, ಈ ಎರಡು ವಿಚಾರಗಳಲ್ಲಿ ಹೆಚ್ಚು ಕೇಂದ್ರೀಕೃತವಾಗಿದೆ. ಪಂಪ ಜಿನಪುರಾಣವನ್ನು ಜಿನಾಗಮವನ್ನು ಹೇಳುತ್ತಿದ್ದೇನೆಂದು ಹೇಳಿಕೊಂಡರೂ ಅದಕ್ಕೆ ಸಂಬಂಧಿಸಿದ ಭಾಗಗಳು ಎಷ್ಟು ನೀರಸವಾಗಿ ನಿರೂಪಿತವಾಗಿವೆಯೆಂದರೆ ಆದಿಪುರಾಣದಲ್ಲಿ ಪ್ರಕೃತಿ ವರ್ಣನೆ, ಪ್ರೇಮ, ವಿರಹಗಳನ್ನು ತೆಗೆದುಹಾಕಿದರೆ ಪಂಪನ ಬಗ್ಗೆ ಹೇಳಲು ಏನು ಉಳಿಯವುದಿಲ್ಲ. ಪಂಪನಿಗೆ ಆದಿಪುರಾಣದಲ್ಲಿ ಪ್ರಕೃತಿಯೇ ಮನಸ್ಸನ್ನು ಸೂರೆಗೊಂಡು ಗಮನ ಪಡೆದಿದೆ."8

ಈ ಹೇಳಿಕೆಗೆ ಪೂರಕವಾಗಿ ಲಲಿತಾಂಗ–ಸ್ವಯಂಪ್ರಭೆ ಮತ್ತು ವಜ್ರಜಂಘ ಮತ್ತು ಶ್ರೀಮತಿಯರ ಪ್ರಣಯ ಪ್ರಸಂಗದ ಪದ್ಯಗಳನ್ನು ಉಲ್ಲೇಖಿಸಲಾಗಿದೆ. ವೀರಣ್ಣ ಅವರ 'ಕನ್ನಡ ಪ್ರತಿಭಟನೆ ಕಾವ್ಯ' ಎಂಬ ಸಂಪಾದಿತ ಕೃತಿಯಲ್ಲಿ ಆದಿಪುರಾಣದ ಮೂರು ಪದ್ಯಗಳನ್ನು ಸಂಗ್ರಹಿಸಿದ್ದಾರೆ, ಅವುಗಳೆಂದರೆ 'ಕವಿತೆಯೊಳಾಸೆಗೆಯ್ವ ಫಲಮಾವುದೋ?...', 'ಒಡಲೊಳೆ ಜೀವಮಿರ್ದ ಗಡ', 'ತಲೆವರದುಟ್ಟುದಿಕ್ಕಿ ಸುರಲೋಕ ಸುಖಂ ಗಳನುಗ್ಗಿವೆಂಬ ಬತ್ತಲೊಗರ ಮಾತುಗೊಳ್ಳದಿರು ಬಾಳ್ವಿನಮಿಂದ್ರಿಯವರ್ಗದಿಚ್ಛೆಯಂ ಸಲಿಸಿ...."[9] ಈ ಮೂರು ಪದ್ಯಗಳು ಜಿನತತ್ವವನ್ನು ನಿರಚನೆಗೊಳಿಸುತ್ತವೆ ಕವಿತೆಯೊಳಾಸೆಗೆಯ್ವ ಫಲವೇನು? ಗೌರವ, ಕೀರ್ತಿ, ಲಾಭ – ಇವೆ. ಜಿನೇಂದ್ರಸ್ತುತಿಯಿಂದ ಮುಕ್ತಿಯೆಂಬ ಲಾಭ ತನ್ನಷ್ಟಕ್ಕೆ ತಾನೇ ಕೈಸೇರುತ್ತದೆ. ಬೇರೆಯವರು ಕೊಡುವುದೇನು ಎಂದ ಕವಿಯ ತತ್ವವನ್ನು ಮುಂದಿನ ಎರಡು ಪದ್ಯಗಳು ನಿರಚನೆಗೊಳಿಸುತ್ತವೆ. ವೀರಣ್ಣನವರು ಆದಿಪುರಾಣದಲ್ಲಿ ವರ್ಣಿತವಾಗಿರುವ ಪ್ರೇಮ, ಪ್ರಕೃತಿ, ವಿರಹ, ಕಾಮಗಳನ್ನು ಮುನ್ನೆಲೆಗೆ ತರುತ್ತ, ಜಿನತತ್ವವನ್ನು ನಿರಚನೆಗೊಳಿಸುವ ಮೂಲಕ ಆದಿಪುರಾಣವನ್ನು 'ಸುಖದೊಂದು ತುತ್ತತುದಿ ರಾಗದ ಮೊತ್ತಮೊದಲ್ ನಿರಂತರಾಭ್ಯುದಯದ ಸಾಗರಂ' ಆಗಿರುವ ರಮ್ಯ ಮನೋಹರ ಕಾವ್ಯವನ್ನಾಗಿಸಲು ಹೊರಟಿದ್ದಾರೆ.

ಇ.ಪಿ. ರೈಸ್ ಅವರು ಹೇಳಿರುವ ಏಳು ಕನ್ನಡ ಸಾಹಿತ್ಯ ಲಕ್ಷಣಗಳಲ್ಲಿ ಒಂದು ಲಕ್ಷಣಕ್ಕೆ ಇಲ್ಲಿ ಉತ್ತರಿಸಬಹುದೆನಿಸುತ್ತದೆ. "One misses in India the poetry of pure human love, which forms so large and rich, an element in the literature of the West. This is partly due to the very inferior postiton accorded to woman; but it is also largely due to the fact that marriages are arrange and consummated in very early life, so that neither men and women ordinarily pass through that beautiful and romantic period of courtship, but its unfortunate effect on literature is that the sweet heart is replaced by the courtesan; and instead of the healthy sentiment of a pure love we have nauseous passages of crotic description"[10] ಭಾರತೀಯ ಸಾಹಿತ್ಯದಲ್ಲಿ ಶುದ್ಧವಾದ ಮಾನವಪ್ರೇಮದ ಕಾವ್ಯ ಕಾಣುವುದಿಲ್ಲ. ಹೆಂಗಸಿಗೆ ಭಾರತೀಯ ಸಮಾಜದಲ್ಲಿರುವ ಬಹಳ ಕೀಳಾದ ಸ್ಥಾನವು ಇದಕ್ಕೆ ಅಂಶತಃ ಕಾರಣವಾಗಿದೆ. ಈ ದೇಶದಲ್ಲಿ ಬಾಲ್ಯವಿವಾಹ ಪದ್ಧತಿಯಿದ್ದ ಕಾರಣ ವಿವಾಹಪೂರ್ವ ಪ್ರೇಮವಿಲ್ಲ, ಪ್ರಣಯಾರಾಧನೆಯಿಲ್ಲ, ಸಾಹಿತ್ಯದಲ್ಲಿ ಇದರ ಪರಿಣಾಮವಾಗಿ ಪ್ರಣಯಿನಿಯ ಬದಲು ವೇಶ್ಯೆಯರು ಬಂದಿರುತ್ತಾರೆ. ಶುದ್ಧ ಪ್ರೇಮದ ಸದ್ಭಾವನೆಯ ಸ್ಥಾನದಲ್ಲಿ ಶೃಂಗಾರಿಕ ವರ್ಣನೆಗಳ ಅಶ್ಲೀಲವು ಸೇರಿಕೊಂಡು ಕಾವ್ಯಗ್ರಂಥಗಳ ಬಹುಭಾಗವನ್ನು ವಿರೂಪಗಳಿಸುತ್ತವೆ ಎಂಬ ರೈಸ್ ಅವರ ಹೇಳಿಕೆಯಲ್ಲಿ ಸತ್ಯಾಂಶವಿಲ್ಲ.

ವಿವಾಹಪೂರ್ವ ಪ್ರೇಮದ ವರ್ಣನೆ ಭಾರತೀಯ ಸಾಹಿತ್ಯದಲ್ಲಿ ಅಪರೂಪವಾದರೂ, ವಿವಾಹ ನಂತರದ ಪ್ರೇಮ, ಪ್ರಣಯಗಳು ಶೃಂಗಾರ ಭರಿತವಾಗಿ ಪ್ರಕಾರವಾಗಿವೆ. ಕನ್ನಡದ ಆದಿ ಕಾವ್ಯದಲ್ಲಿಯೇ ಇದು ಪರಿಣಾಮಕಾರಿಯಾಗಿ ಪ್ರಕಟವಾಗಿದೆ ಎಂಬುದನ್ನು ವೀರಣ್ಣ ಅವರು ತೆರೆದು ತೋರಿಸಿದ್ದಾರೆ. ಶುದ್ಧ

ಪ್ರೇಮ ಪ್ರಣಯ, ವಿರಹದ ಹಿನ್ನೆಲೆಯಲ್ಲಿಯೇ ಇವರು ಆದಿಪುರಾಣವನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಧಾರ್ಮಿಕ ಚೌಕಟ್ಟನ್ನೇ ಮೀರಿ ಮಾನವ ಪ್ರೇಮ ಹೇಗೆ ಪ್ರಜ್ವಲಿಸಿದೆ ಎಂಬುದನ್ನು ಈಗಾಗಲೆ ಚರ್ಚಿಸಿದ್ದೇವೆ.

ಆದಿಪುರಾಣ ಆಗಮಿಕ ಕಾವ್ಯವಾದ್ದರಿಂದ ಸಾಮಾನ್ಯ ಜನರ ಬಗೆಗಿನ ಉಲ್ಲೇಖಗಳು ತುಂಬಾ ಕಡಿಮೆ. ಆದರೂ ಕೆಲವು ಸಾಮಾನ್ಯ ಜನರ ಬದುಕಿನ ಸೂಕ್ಷ್ಮ ವಿಚಾರಗಳನ್ನು 'ಕನ್ನಡ ಸಾಹಿತ್ಯ: ಚಾರಿತ್ರಿಕ ಬೆಳವಣಿಗೆ' ಕೃತಿಯಲ್ಲಿ ಗುರುತಿಸಲಾಗಿದೆ. ಲೋಲುಪ ಎನ್ನುವ ಕಲ್ಲುರಿಗ (ಸಿಹಿ ತಿಂಡಿ ಅಂಗಡಿಯವನು)ನ ಪ್ರಸಂಗ, ನಿರ್ನಾಮಿಕೆಯ ಪ್ರಸಂಗ ಮುಖ್ಯವಾದವುಗಳು. ನಿರ್ನಾಮಿಕೆಯ ತಾಯಿ ಮತ್ತು ಅಜ್ಜಿ ಇಬ್ಬರು ಇದ್ದರೂ ಅರಸ ಇವರು ನಿರ್ವಂಶವೆಂದು ಅವರ ಮನೆ, ಆಸ್ತಿಪಾಸ್ತಿಗಳನ್ನು ಎತ್ತಿ ಹಾಕಿಕೊಳ್ಳುತ್ತಾನೆ. ಅವರಿಬ್ಬರೂ ಬೇರೆಯವರ ಮನೆಯ ಹಿತ್ತಲಿನಲ್ಲಿ ಬದುಕುತ್ತಿದ್ದಾಗ ನಿರ್ನಾಮಿಕೆ ಹುಟ್ಟುತ್ತಾಳೆ. ಹುಟ್ಟಿದ ಮಗುವಿನ ಕೊಳಕಿಗೆ ಹೇಸಿ ಆ ಮನೆಯವರು ಹಿತ್ತಲಿನಿಂದ ಅವರನ್ನು ಓಡಿಸುತ್ತಾರೆ. ಅವರಿಬ್ಬರೂ ಮಗುವಿನೊಂದಿಗೆ ಸ್ಮಶಾನಕ್ಕೆ ಹೋಗಿ ನೆಲೆಸಿ ಅಲ್ಲಿ ಸಿಕ್ಕ ಹರಿದ ಚೂರು ಬಟ್ಟೆಗಳಲ್ಲಿ ಮಗುವನ್ನು ಮಲಗಿಸುತ್ತಾರೆ. ತಾಯಿ ಮಗಳಿಬ್ಬರೂ ಭಿಕ್ಷೆ ಬೇಡಿ, ಅವರಿವರು ಕೊಟ್ಟ ಎಂಜಲನ್ನು ಮಗುವಿಗೆ ತಿನ್ನಿಸಿ ಸಾಕುತ್ತಾರೆ. ಕಾವ್ಯಗಳಲ್ಲಿ ರಾಜಭೋಗದ ಜೊತೆಗೆ ಅಲ್ಲಿ ಇಲ್ಲಿ ಸಾಮಾನ್ಯ ಜನರ ನೈಜ ಬದುಕು ಚಿತ್ರಿತವಾಗಿರುತ್ತದೆ.

ಸಿ.ವೀರಣ್ಣ ಸಂಗ್ರಹಿಸಿರುವ 'ಕನ್ನಡ ಪ್ರತಿಭಟನೆ ಕಾವ್ಯ'ದಲ್ಲಿ ಪ್ರತಿಭಟನೆ ಧ್ವನಿ ಇರುವ ವಿಕ್ರಮಾರ್ಜುನ ವಿಜಯದ ಮೂರು ಪದ್ಯಗಳನ್ನು ಸಂಗ್ರಹಿಸಿದ್ದಾರೆ. ಆ ಮೂರು ಪದ್ಯಗಳು ದುರ್ಯೋಧನ ಮತ್ತು ಕರ್ಣ ಕುಲ ವ್ಯವಸ್ಥೆಯನ್ನು ವಿರೋಧಿಸುವ ಪದ್ಯಗಳಾಗಿವೆ. ಸಾಹಿತ್ಯ ಚರಿತ್ರೆಯಲ್ಲಿಯೂ ಈ ಪದ್ಯಗಳನ್ನು ಉದಾಹರಿಸಿ, ಪಂಪ ತನ್ನ ಕಾಲಕ್ಕಾಗಲೇ ತೊಡಕಾಗಿದ್ದ ಜಾತಿ, ಕುಲಗಳ ಬಗ್ಗೆ ರೊಚ್ಚನ್ನು ಪ್ರಕಟ ಮಾಡಿದ್ದಾನೆ ಎಂದಿದ್ದಾರೆ. ಆದರೆ ಅರವಿಂದ ಮಾಲತ್ತಿ ಅವರು ಸಾಕ್ಷಿ ಸಮೇತವಾಗಿ ವೀರಣ್ಣ ಅವರ ಈ ಹೇಳಿಕೆಯನ್ನು ವಿರೋಧಿಸುತ್ತ, "ಇಲ್ಲಿ ಸಹಾನುಭೂತಿ ಪರವಾದ ದೃಷ್ಟಿಕೋನಕ್ಕಿಂತ ಪಂಪನ ವೈಯಕ್ತಿಕ ಎಂದರೆ, ಬ್ರಾಹ್ಮಣನಾಗಿದ್ದು ಬ್ರಾಹ್ಮಣ ಪೂರ್ವಾಶ್ರಮದ ಮೇಲಿರುವ ಅಭಿಮಾನದ ಗೀಳು ಜೈನ ಬ್ರಾಹ್ಮಣನಾಗಿ ಬದುಕುತ್ತಿದ್ದ ಅನುಭವದ ಪಾಡು, ಇವೆರಡರ ನಡುವೆ ಇದ್ದ ಪಂಪನ ವ್ಯಕ್ತಿತ್ವವೇ ಈ ರೀತಿಯ ಅಭಿವ್ಯಕ್ತಿಗಾಗಲಿ, ಕರ್ಣನ ಪಾತ್ರ ಚಿತ್ರಣಕ್ಕಾಗಲಿ ಕಾರಣವಾಗಿದೆ ಎಂದು ನಿಸ್ಸಂಕೋಚವಾಗಿ ಹೇಳಬಹುದು" (ಪಂಪನ ಕಾವ್ಯಗಳಲ್ಲಿ ಅನಾವರಣಗೊಂಡ ವರ್ಣ–ಜಾತಿ ವ್ಯವಸ್ಥೆಯ ಜಿಜ್ಞಾಸೆ) ಎಂದಿದ್ದಾರೆ.[11]

ಜಿ.ಎಚ್. ನಾಯಕ ಅವರು 'ಪಂಪ ಭಾರತ: ಮತ್ತೆ ಓದಿದಾಗ' ಎಂಬ ಲೇಖನದಲ್ಲಿ "ಕರ್ಣ ಜಾತಿ ವ್ಯವಸ್ಥೆಯನ್ನು ಸಭೆಯಲ್ಲಿ ವಿರೋಧಿಸುವ ಹೊತ್ತಿಗಾಗಲೇ ಆತನಿಗೆ ತಾನು ಕ್ಷತ್ರಿಯ ಕುಲದವನೆಂದು ತಿಳಿದಿತ್ತು. ಆ ಒಳ ಪೊಗರು ಕರ್ಣನಲ್ಲಿ ಆಟಾಟೋಪದ ಠೇಂಕಾರದ ಮಾತನಾಡಿಸಿದೆ ಹೊರತು ಜಾತಿವ್ಯವಸ್ಥೆಯ ವಿರೋಧವಲ್ಲ. ಬಿಲ್ವಿದ್ಯೆ ಪರೀಕ್ಷೆ ಸಮಯದಲ್ಲಿ ಕುಲದ ವಿಷಯ ಬಂದಾಗ ಕರ್ಣನ ಪ್ರತಿಕ್ರಿಯೆ ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ"[12] ಎಂದಿದ್ದಾರೆ. ಇನ್ನು ದುರ್ಯೋಧನ ಕುಲವ್ಯವಸ್ಥೆ ವಿರೋಧಿಸಿದ್ದು ಪಾಂಡವರ ಮೇಲಿನ ಅವನ ಸ್ವಾರ್ಥಕ್ಕಾಗಿ. ಪಂಪನಲ್ಲಿದ್ದ ಜಾತಿ, ಕುಲಗಳ ರೊಚ್ಚು

ದುರ್ಯೋಧನ ಮತ್ತು ಕರ್ಣರ ಬಾಯಲ್ಲಿ ಪ್ರಕಟವಾಗಿದೆ ಎಂಬ ವೀರಣ್ಣ ಅವರ ಹೇಳಿಕೆ ನೈಜವಲ್ಲವೆನಿಸುತ್ತದೆ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಪಂಪಭಾರತದಿಂದ ಅಂದಿನ ಸಾಮಾಜಿಕ ಸನ್ನಿವೇಶದ ಬಗ್ಗೆ ತಿಳಿಯಲು ಹಲವಾರು ಆಧಾರಗಳು ಸಿಗುತ್ತವೆ. 'ರಾಜ ಬೀಜ ಸಂಜನಿತ ಗುಣಂ ಮದಂ ಮದದುನಾಳ್ದ ವಿವೇಕತೆಯಿಂದಮಲ್ತೆ ತೊಟ್ಟಿನ ಮೊಲವಾಲನುಂಡ ಗುಣಮಿಂತಿವನಾರ್ ಕಿಡಿಪರ್ ನರೇಂದ್ರರೊಳ್' ಶಲ್ಯನ ಬಾಯಿಂದ ಬರುವ ಈ ಮಾತು ಹಲವಾರು ಹೊಳವುಗಳನ್ನು ಹುಟ್ಟಿಸುತ್ತದೆ. ರಾಜಕುಮಾರರಿಗೆ ದಾಸಿಯರು ಹಾಲನ್ನು ಕುಡಿಸುತ್ತಿದ್ದರು ಎಂದಿದ್ದಾರೆ. ದಾಸಿಯರ ಮಕ್ಕಳ ಕತೆಯೇನು? ರಾಣಿಯರು ರಾಜಕುಮಾರರಿಗೆ ಏಕೆ ಹಾಲು ಕುಡಿಸುತ್ತಿರಲಿಲ್ಲ? ಮಕ್ಕಳಿಗೆ ಹಾಲು ಕುಡಿಸುವುದರಿಂದ ಅವರ ಸೌಂದರ್ಯ ಕುಂದಿ ರಾಜನಿಗೆ ನಾನು ಬೇಡದವಳಾಗುತ್ತೇನೆ ಎಂಬ ಭಯ ಅವರಲ್ಲಿತ್ತೆ? ರಾಜನ ಸಲುವಾಗಿ ಇಲ್ಲಿ ಇಂತಹ ಅನ್ಯಾಯ ನಡೆಯುತ್ತಿತ್ತು ಎಂಬುದು ಗಮನಿಸತಕ್ಕ ವಿಷಯ.

**ಕೊನೆಟಿಪ್ಪಣಿಗಳು**

1. ನರಸಿಂಹಚಾರ್. ಡಿ.ಎಲ್. ಪಂಪಭಾರತ ದೀಪಿಕೆ. ಪು.ಸಂ 518.
2. ಅರವಿಂದ ಮಾಲಗತ್ತಿ. ಪಂಪನ ಕಾವ್ಯಗಳಲ್ಲಿ ಅನಾವರಣಗೊಂಡ ವರ್ಣ, ಜಾತಿ ವ್ಯವಸ್ಥೆಯ ಜಿಜ್ಞಾಸೆ. ಶತಮಾನದ ವಿಮರ್ಶೆ. ಪು.ಸಂ 914.
3. ಎಚ್. ತಿಪ್ಪೇರುದ್ರಸ್ವಾಮಿ. ಕರ್ಣಾಟಕ ಸಂಸ್ಕೃತಿ ಸಮೀಕ್ಷೆ. ಪು.ಸಂ 121.
4. ಪೂರ್ವೋಕ್ತ. ಪು.ಸಂ 122.
5. ಪೂರ್ವೋಕ್ತ. ಪು.ಸಂ 122.
6. ರಂ.ಶ್ರೀ ಮುಗಳಿ. ಕನ್ನಡ ಸಾಹಿತ್ಯ ಚರಿತ್ರೆ. ಪು.ಸಂ 84.
7. Jonathan cullar: On Deconstruction.
8. ಸಿ. ವೀರಣ್ಣ. ಕನ್ನಡ ಸಾಹಿತ್ಯ. ಚಾರಿತ್ರಿಕ ಬೆಳವಣಿಗೆ, ಸಂ. 1. ಪು.ಸಂ 114.
9. ಸಿ. ವೀರಣ್ಣ. 'ಕನ್ನಡ ಪ್ರತಿಭಟನೆ ಕಾವ್ಯ'. ಪು.ಸಂ 13.
10. E.P. Rice. History of Canarese Literature. P.No. 80–81.
11. ಅರವಿಂದ ಮಾಲಗತ್ತಿ. ಪಂಪನ ಕಾವ್ಯಗಳಲ್ಲಿ ಅನಾವರಣಗೊಂಡ ವರ್ಣ, ಜಾತಿ ವ್ಯವಸ್ಥೆಯ ಜಿಜ್ಞಾಸೆ, ಶತಮಾನದ ವಿಮರ್ಶೆ. ಪು.ಸಂ 913
12. ಜಿ.ಎಚ್. ನಾಯಕ. ಪಂಪ ಭಾರತ ಮತ್ತೆ ಓದಿದಾಗ, ಮತ್ತೆ ಮತ್ತೆ ಪಂಪ. ಪು.ಸಂ. 70.